## ಸರ್ಕಾರ ಸೂಚನೆ, 8,176 ಪೊಲೀಸ್ ಹುದ್ದೆ ಭರ್ತಿಗೆ ಚಾಲನೆ

# ಸರ್ಕಾರಿ ಹುದ್ದೆ ನೇರ ನೇಮಕ ಶುರು

■ ಕೀರ್ತಿನಾರಾಯಣ ಸಿ. ಬೆಂಗಳೂರು

ಸರ್ಕಾರದ ವಿವಿಧ ಇಲಾಖೆಗಳಲ್ಲಿ ಖಾಲಿ ಉಳಿದಿರುವ ನೇರ ನೇಮಕಾತಿ ಹುದ್ದೆ ಪೈಕಿ 56,432 ಹುದ್ದೆಗಳ ನೇಮಕಾತಿ ಪ್ರಕ್ರಿಯೆಗೆ ಚಾಲನೆ ಸಿಕ್ಕಿರುವುದು ಉದ್ಯೋಗಾಕಾಂಕ್ಷಿಗಳ ಮುಖದಲ್ಲಿ ಮಂದಹಾಸ ಮೂಡಿಸಿದೆ. ಮುಂದಿನ 30 ದಿನದಲ್ಲಿ ನೇಮಕಾತಿ ಮಾಡುವಂತೆ ಸರ್ಕಾರ ಆದೇಶ ಹೊರಡಿಸಿದ ಬೆನ್ನಲ್ಲೇ ಪ್ರಥಮವಾಗಿ ಪೊಲೀಸ್ ಇಲಾಖೆಯಲ್ಲಿ ಬರೋಬ್ಬರಿ 8,176 ಹುದ್ದೆ ಭರ್ತಿಗೆ ಮುಂದಡಿ ಇಡಲಾಗಿದೆ. ಇದರೊಂದಿಗೆ ಮೀಸಲಾತಿ ಗೊಂದಲದಿಂದ ಹಲವು ವರ್ಷಗಳಿಂದ ನನೆಗುದಿಗೆ ಬಿದ್ದಿದ್ದ ಹುದ್ದೆ ಭರ್ತಿ ಪ್ರಕ್ರಿಯೆ ಟೇಕಾಫ್ ಆಗಿದೆ.

ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಿಗೆ ಮೀಸಲಾತಿ ಪ್ರಮಾಣವನ್ನು ಕ್ರಮವಾಗಿ ಶೇ.15 ರಿಂದ ಶೇ. 17ಕ್ಕೆ ಹಾಗೂ ಶೇ.3 ರಿಂದ ಶೇ.7ಕ್ಕೆ ಹೆಚ್ಚಿಸಿರುವ ಅಧಿನಿಯಮ ಪ್ರಶ್ನಿಸಿ ಹೈಕೋರ್ಟ್‌ಗೆ ಅರ್ಜಿ ಸಲ್ಲಿಸಲಾಗಿದೆ. ಹೈಕೋರ್ಟ್ ಮಧ್ಯಂತರ ಆದೇಶದ ಅನ್ವಯ ಖಾಲಿ ಉಳಿದಿರುವ ಸಿವಿಲ್ ಸೇವಾ ಹುದ್ದೆಗಳ ಭರ್ತಿ ಪ್ರಕ್ರಿಯೆ ಮುಂದುವರಿಸಲು ಸರ್ಕಾರ ಸೂಚಿಸಿದೆ. ▶ ಪುಟ 2



ಸಾಂದರ್ಭಿಕ ಚಿತ್ರ

### ಪೊಲೀಸ್ ಹುದ್ದೆಗಳ ನೇರ ನೇಮಕಾತಿ ವಿವರ

| ಹುದ್ದೆ | ಕ.ಕರ್ನಾಟಕ | ಕ.ಕರ್ನಾಟಕೇತರ | ಒಟ್ಟು |
|---|---|---|---|
| ಡಿಎಸ್ಐ | 05 | 15 | 20 |
| ಎಪಿಸಿ | 275 | 1375 | 1650 |
| ಸಿವಿಲ್ ಪಿಸಿ | 610 | 3500 | 4110 |
| ಕೆಎಸ್ಆರ್‌ಪಿ ಪಿಸಿ | 532 | 1500 | 2032 |
| ಕೆಎಸ್ಐಎಸ್ಎಫ್ ಪಿಸಿ | 364 | 000 | 364 |

### ಸರ್ಕಾರದ ಆದೇಶವೇನು?

- ಎಲ್ಲ ಇಲಾಖೆ/ನೇಮಕಾತಿ ಪ್ರಾಧಿಕಾರ 30 ದಿನದಲ್ಲಿ 56,432 ಹುದ್ದೆಗಳ ನೇರ ನೇಮಕಾತಿ ಪ್ರಕ್ರಿಯೆ ಆರಂಭಿಸಬೇಕು
- ಕರ್ನಾಟಕ ಅನುಸೂಚಿತ ಜಾತಿ ಮತ್ತು ಅನುಸೂಚಿತ ಪಂಗಡಗಳು ಅಧಿನಿಯಮ ಪ್ರಶ್ನಿಸಿ ಹೈಕೋರ್ಟ್‌ಗೆ ಅರ್ಜಿ
- ದಾಖಲಾಗಿರುವ ಪ್ರಕರಣಗಳಲ್ಲಿ ಹೈಕೋರ್ಟ್ ಅಂತಿಮ ತೀರ್ಪಿಗೆ ಒಳಪಟ್ಟು ನೇರ ನೇಮಕಾತಿ ಮಾಡಬೇಕು
- 2022ರ ಆದೇಶದ ಪೂರ್ವದಲ್ಲಿ ಜಾರಿಯಲ್ಲಿದ್ದ ಮೀಸಲಾತಿ ಆದೇಶ, ರೋಸ್ಟರ್ ಬಿಂದುಗಳ ಅನ್ವಯ ನೇಮಕಾತಿ ▶ ಪುಟ 2

# ಸರ್ಕಾರಿ ಹುದ್ದೆ ನೇಮಕ ಶುರು

## ಪ್ರಥಮವಾಗಿ ಪೊಲೀಸ್ ಇಲಾಖೆಯಲ್ಲಿ ನೇಮಕಾತಿ

**ಮೊದಲನೇ ಪುಟದಿಂದ...**

ಈ ನೇಮಕಾತಿ ಹೈಕೋರ್ಟ್ ಹೊರಡಿಸುವ ಅಂತಿಮ ತೀರ್ಪಿಗೆ ಒಳಪಟ್ಟಿರುತ್ತದೆ ಎಂದು ಷರತ್ತು ವಿಧಿಸಲಾಗಿದೆ. ಪ್ರಥಮವಾಗಿ ಪೊಲೀಸ್ ಇಲಾಖೆಯಲ್ಲಿ ನೇಮಕಾತಿ ಪ್ರಕ್ರಿಯೆ ಆರಂಭವಾಗಿದೆ. ಡಿಟೆಕ್ಟಿವ್ ಸಬ್ ಇನ್‌ಸ್ಪೆಕ್ಟರ್ಸ್, ಸಿವಿಲ್ ಮತ್ತು ಸಶಸ್ತ್ರ ಪೊಲೀಸ್ ಕಾನ್‌ಸ್ಟೆಬಲ್, ಕೆಎಸ್‌ಆರ್‌ಪಿ, ಕೆಎಸ್‌ಐಎಸ್‌ಎಫ್ 8,176 ಕಾನ್‌ಸ್ಟೆಬಲ್ ಹುದ್ದೆಗಳ ನೇರ ನೇಮಕಾತಿಗೆ ಸರ್ಕಾರ ಅನುಮತಿ ಕೊಟ್ಟಿದೆ. ನಗರ, ಜಿಲ್ಲಾ ಘಟಕಗಳಿಗೆ ಮರು ಹಂಚಿಕೆ ಮಾಡಿ ಕಳುಹಿಸಿದ್ದ ಹುದ್ದೆ ಮರು ಪರಿಶೀಲಿಸುವಂತೆ ಆದೇಶಿಸಲಾಗಿದೆ.

ಆಯಾ ಘಟಕಗಳಲ್ಲಿ ಹಂಚಿಕೆಯಾಗಿರುವ ಒಟ್ಟಾರೆ ಹುದ್ದೆಗಳಲ್ಲಿ ಶೇ.6 ಹುದ್ದೆ ಕಾಯ್ದಿರಿಸಿಕೊಂಡು ಉಳಿಕೆಯಾಗಿರುವ ಹುದ್ದೆಗಳ ನೇಮಕಾತಿಗೆ ಗ್ರೀನ್ ಸಿಗ್ನಲ್ ಕೊಟ್ಟಿದೆ. ಸದ್ಯ ಮೀಸಲಾತಿ ಗೊಂದಲ ಮುಂದುವರಿದಿರುವ ಹಿನ್ನೆಲೆಯಲ್ಲಿ 2022 ಡಿ.28ರ ಸರ್ಕಾರಿ ಆದೇಶಕ್ಕೂ ಪೂರ್ವದಲ್ಲಿ ಜಾರಿಯಲ್ಲಿದ್ದ ಮೀಸಲಾತಿ ಪ್ರಮಾಣ ಶೇ.50 ಹಾಗೂ ಸಮತಳ ಮೀಸಲಾತಿಯನ್ನು 2023ರಲ್ಲಿ ನಿಗದಿಪಡಿಸಿರುವ ರೋಸ್ಟರ್ ಬಿಂದುಗಳ ಅನುಸಾರ ಮರುವರ್ಗೀಕರಣ ಮಾಡಿ ಪೊಲೀಸ್ ನೇಮಕಾತಿ ವಿಭಾಗಕ್ಕೆ ಕಳುಹಿಸುವಂತೆ ರಾಜ್ಯ ಪೊಲೀಸ್ ಮಹಾನಿರ್ದೇಶಕ ಡಾ.ಎಂ.ಎ. ಸಲೀಂ ಮಂಗಳವಾರ (ಮಾ.3) ಆದೇಶ ಹೊರಡಿಸಿದ್ದಾರೆ. ಇದರನ್ವಯ ಈ ಹಿಂದೆ ಜಾರಿಯಲ್ಲಿದ್ದ ಮೀಸಲಾತಿ ಅನ್ವಯ ನೇರ ನೇಮಕಾತಿ ಪ್ರಕ್ರಿಯೆ ನಡೆಯಲಿದ್ದು, ಅದು ಹೈಕೋರ್ಟ್‌ನ ಅಂತಿಮ ತೀರ್ಪಿಗೆ ಒಳಪಟ್ಟಿರುತ್ತದೆ. ಇದೇ ರೀತಿ ಬೇರೆಬೇರೆ ಇಲಾಖೆಗಳಲ್ಲೂ ಹುದ್ದೆಗಳ ಭರ್ತಿಗೆ ಅಧಿಸೂಚನೆ ಹೊರಡಿಸಲು ಸಿದ್ಧತೆ ನಡೆದಿದೆ.

### ಮುಂದೇನು?

- ಪೊಲೀಸ್ ಘಟಕಗಳಲ್ಲಿರುವ ಹುದ್ದೆಗಳ ಮರುಹಂಚಿಕೆ
- ಪೊಲೀಸ್ ನೇಮಕಾತಿ ವಿಭಾಗಕ್ಕೆ ವಿವರಗಳ ರವಾನೆ
- ಸರ್ಕಾರದ ಸೂಚನೆಯಂತೆ ನೇರನೇಮಕಾತಿ ಹುದ್ದೆ ಪರಿಶೀಲನೆ
- ನೇಮಕಾತಿ ಪ್ರಕ್ರಿಯೆ ಆರಂಭಕ್ಕೆ ಅಧಿಕೃತವಾಗಿ ಅಧಿಸೂಚನೆ ಪ್ರಕಟ



**ಪೊಲೀಸ್ ಇಲಾಖೆಯಲ್ಲಿ ಸಿಬ್ಬಂದಿ ಕೊರತೆ ಇದೆ. ಹೋಂ ಗಾರ್ಡ್ಸ್ ಬಳಕೆ ಮಾಡಿಕೊಂಡು ಕೆಲಸ ನಿರ್ವಹಿಸಲಾಗುತ್ತಿದೆ. ಶೀಘ್ರದಲ್ಲೇ 8,500 ಪೊಲೀಸ್ ಸಿಬ್ಬಂದಿ ನೇಮಕಾತಿಗೆ ಸಿದ್ಧತೆ ಮಾಡಿಕೊಳ್ಳಲಾಗಿದೆ.**

**| ಡಾ.ಎಂ.ಎ.ಸಲೀಂ** ಡಿಜಿ-ಐಜಿಪಿ

### ಸರ್ಕಾರದ ಆದೇಶವೇನು?

**ಮೊದಲನೇ ಪುಟದಿಂದ...**

**1995ರ ಅನ್ವಯ ಮೀಸಲಾತಿ ಪ್ರಮಾಣ ಶೇ.50 ನಿಗದಿಪಡಿಸಿ ನೇಮಕಾತಿ ಅಧಿಸೂಚನೆ ಹೊರಡಿಸಬೇಕು**

- ಆಯಾ ಇಲಾಖೆ/ನೇಮಕಾತಿ ಪ್ರಾಧಿಕಾರಗಳು ಹುದ್ದೆಗಳಲ್ಲಿ ಶೇ.6(ಪರಿಶಿಷ್ಟ ಜಾತಿಗೆ ಶೇ.2 ಮತ್ತು ಪರಿಶಿಷ್ಟ ಪಂಗಡಕ್ಕೆ ಶೇ.4) ಹುದ್ದೆ ಕಾಯ್ದಿರಿಸಬೇಕು
- ಹಿಂದಿನ ನೇಮಕಾತಿಯಲ್ಲಿ ಯಾವ ಬಿಂದುವಿನಲ್ಲಿ ನಿಲ್ಲಿಸಲಾಗಿತ್ತೋ ಮುಂದಿನ ಬಿಂದುವಿನಿಂದ ನೇಮಕಾತಿ ಆರಂಭಿಸಬೇಕು
- 2025 ನ.27ರ ಹೈಕೋರ್ಟ್ ಮಧ್ಯಂತರ ಆದೇಶಕ್ಕಿಂತ ಹಿಂದಿನ ನೇಮಕಾತಿ ಅಧಿಸೂಚನೆ ಯಥಾಪ್ರಕಾರ ಮುಂದುವರಿಸಬೇಕು